International Journal of Kannada Research
www.kannadajournal.com

**ISSN: 2454-5813**
IJKR 2022; 8(4): 96-99
© 2022 IJKR
www.kannadajournal.com
Received: 16-08-2022
Accepted: 18-09-2022

**ರವೀಂದ್ರನಾಥ್ ಡಿ ಬಿ**
ಸಂಶೋಧನಾರ್ಥಿ, ಜಾನಪದ ಅಧ್ಯಯನ ವಿಭಾಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ ಕರ್ನಾಟಕ, ಭಾರತ

**Corresponding Author:**
**ರವೀಂದ್ರನಾಥ್ ಡಿ ಬಿ**
ಸಂಶೋಧನಾರ್ಥಿ, ಜಾನಪದ ಅಧ್ಯಯನ ವಿಭಾಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ ಕರ್ನಾಟಕ, ಭಾರತ

# ಕುಂಚಿಟಿಗ ಸಮುದಾಯದ ಸಾಮಾಜಿಕ ಜೀವನ

**ರವೀಂದ್ರನಾಥ್ ಡಿ ಬಿ**

**ಪೀಠಿಕೆ**
ಭಾರತೀಯ ಸಮಾಜವು ಸಮುದಾಯಗಳಿಂದ ಕೂಡಿದ ಸಮಾಜವಾಗಿದ್ದು, ಹಲವು ಜಾತಿ, ಸಮುದಾಯಗಳು ಶ್ರೇಣಿಕೃತವಾಗಿದ್ದು ವರ್ಣಾಶ್ರಮ ಧರ್ಮದ ಆಧಾರದ ಮೇಲೆ ರಚನೆಯಾಗಿದೆ. ವೇದಪೂರ್ವಯುಗದಲ್ಲಿ ಕೃಷಿಕರು ಮೊದಲ ಸ್ಥಾನದಲ್ಲಿದ್ದು ನಂತರದ ಬೆಳವಣಿಗೆಯಿಂದ ನಾಲ್ಕನೇ ಸ್ಥಾನಕ್ಕೆ ಗುರಿಯಾಗಿದ್ದು ಭಾರತದ ಸಾಮಾಜಿಕ ವ್ಯವಸ್ಥೆಯ ದುರಂತವಾಗಿದೆ. ದಕ್ಷಿಣ ಭಾರತದ ಕೃಷಿಕರಲ್ಲಿ ಕುಂಚಿಟಿಗರು ಶ್ರಮಸಂಸ್ಕೃತಿಯ ಶೂದ್ರವರ್ಗದಲ್ಲಿ ಗುರುತಿಸಲ್ಪಟ್ಟಿದ್ದು ಆರ್ಯ ಸಂಸ್ಕೃತಿಯ ಪ್ರಭಾವ ಇದ್ದರೂ ಕುಂಚಿಟಿಗರು ಮೂಲತಃ ದ್ರಾವಿಡ ಜನಾಂಗಕ್ಕೆ ಸೇರಿದವರಾಗಿದ್ದಾರೆ. ಅವರ ಮಟ್ಟಸವಾದ ನಿಲುವು, ಕಂದುಬಣ್ಣ ಮತ್ತಿತರ ದೈಹಿಕ ಲಕ್ಷಣಗಳನ್ನು ಗಮನಿಸಿದಾಗ ದ್ರಾವಿಡ ಬುಡಕಟ್ಟಿನ ಸೆಮಿಟಿಕ್ ಶಾಖೆಗೆ ಸೇರಿದವರು ಎಂದು ಡಾ॥ ಗುಹರವರು ಅಭಿಪ್ರಾಯ ಪಟ್ಟಿದ್ದಾರೆ. ಕುಂಚಿಟಿಗರು ವಿಶೇಷವಾಗಿ ಕರ್ನಾಟಕ, ಆಂಧ್ರ, ತಮಿಳುನಾಡುಗಳಲ್ಲಿ ಹೆಚ್ಚಾಗಿ ವಾಸಿಸುತ್ತಿದ್ದು ಇತರೆ ರಾಜ್ಯಗಳಲ್ಲಿ ವಿರಳವಾಗಿ ನೆಲೆಸಿದ್ದಾರೆ. ಇಲ್ಲಿ ಸಮುದಾಯಗಳ ನಡುವಿನ ಕೌಟುಂಬಿಕ ಸಂಬಂಧ, ಬೆಡಗು/ಗೋತ್ರಗಳ ವಿಂಗಡಣೆ ಸಾಮಾಜಿಕ ಮತ್ತು ಧಾರ್ಮಿಕ ಜೀವನದ ಜೊತೆ ವಸತಿ ಆಹಾರ ವೇಷಭೂಷಣ ಸ್ತ್ರೀಯರ ಸ್ಥಾನಮಾನ ನ್ಯಾಯಪದ್ಧತಿ ಮತ್ತು ಶ್ರಮಸಂಸ್ಕೃತಿಯನ್ನು ಸಮಗ್ರ ಸ್ವರೂಪದಲ್ಲಿ ತಿಳಿದುಕೊಳ್ಳುವ ಪ್ರಯತ್ನ ಮಾಡಲಾಗಿದೆ.

**ಕೌಟುಂಬಿಕ ಜೀವನ**
ಸಮಾಜದ ಚಿಕ್ಕ ಘಟಕ ಕುಟುಂಬವಾಗಿದ್ದು ಪ್ರಾಚೀನ ಕುಂಚಿಟಿಗ ಸಮಾಜ ಅವಿಭಕ್ತ ಕುಟುಂಬ ಪದ್ಧತಿಯನ್ನು ರೂಢಿಸಿಕೊಂಡಿತ್ತು. ತಂದೆ, ತಾಯಿ, ಅಣ್ಣ, ತಮ್ಮ, ಮಕ್ಕಳು, ಮೊಮ್ಮಕ್ಕಳು ಹೀಗೆ ಹಲವು ತಲೆಮಾರಿನ ಜನರು ಒಂದೇ ಸೂರಿನಲ್ಲಿ ವಾಸಿಸುತ್ತಿದ್ದರು. ಇದು ತನ್ನ ಸದಸ್ಯರಿಗೆಲ್ಲಾ ಸಾಮಾಜಿಕ ಭದ್ರತೆಯನ್ನು ನೀಡಿತ್ತು. ಯಜಮಾನ ಕುಟುಂಬದ ವ್ಯವಹಾರಗಳನ್ನು ನೋಡಿಕೊಳ್ಳುತ್ತಿದ್ದ ಉಳಿದವರು ಹೊಲಗದ್ದೆಗಳಲ್ಲಿ ದುಡಿದರೆ, ಹೆಂಗಸರು ಮನೆಗಳಲ್ಲಿ ದುಡಿದು ಊಟಹೊತ್ತು ಹೊಲದಕಡೆ ಹೋಗುತ್ತಿದ್ದರು. ಅದಕ್ಕೆ 'ಗೌಡ ಗದ್ದೆಗೆ, ಗೌಡ್ತಿ ಮುದ್ದೆಗೆ' ಎಂಬ ಮಾತು ಸರ್ವಕಾಲೀಕವಾಗಿದೆ. 'ಮನೆಯೇ ಮೊದಲ ಪಾಠಶಾಲೆ' ಎಂಬಂತೆ ಅರಿವಿನ ಶಿಕ್ಷಣವನ್ನು ಕುಟುಂಬವೇ ನೀಡುತ್ತ ಬಂದಿದೆ. ಕುಂಚಿಟಿಗ ಸಮುದಾಯದಲ್ಲಿ ಅವಿಭಕ್ತ ಕುಟುಂಬಗಳಿಗಿಂತಲೂ ವಿಭಕ್ತ ಕುಟುಂಬಗಳೇ ಇಂದು ಹೆಚ್ಚಾಗಿ ಕಂಡುಬರುತ್ತವೆ. ಇದು ದಾವಣಗೆರೆ ಮತ್ತು ಚಿತ್ರದುರ್ಗ ಜಿಲ್ಲೆಗಳಿಗೂ ಹೊರತಾಗಿಲ್ಲ. ಕಾಲಕ್ರಮೇಣದಲ್ಲಿ ಆಧುನಿಕತೆಯ ಪ್ರಭಾವಕ್ಕೊಳಪಟ್ಟು ವಿಭಕ್ತ ಕುಟುಂಬಗಳಾಗಿ ವಿಂಗಡಣೆಗೊಂಡಿರುವುದನ್ನು ನಾನು ಕ್ಷೇತ್ರ ಕಾರ್ಯ ಕೈಕೊಂಡಾಗ ಕಂಡುಬಂದಹ ಸತ್ಯ ಸಂಗತಿಯಾಗಿದೆ. ಒಟ್ಟಿನಲ್ಲಿ ಕುಂಚಿಟಿಗರದು ಅನ್ಯೂನ್ಯತೆಯ ಸಹಬಾಳ್ವೆಯಾಗಿ ಕುಟುಂಬ ಜೀವನ ತೃಪ್ತಿಕರವಾಗಿದೆ.

**ಸಾಮಾಜಿಕ ಜೀವನ**
ಭಾರತೀಯ ಜಾತಿ ಪದ್ಧತಿಯ ಸ್ತರ ವಿನ್ಯಾಸದಲ್ಲಿ ಕುಂಚಿಟಿಗ ಜಾತಿಯು ಒಂದು. ಈ ಜಾತಿಯು ಪ್ರಾಚೀನ ಹಾಗೂ ಆಧುನಿಕ ಭಾರತೀಯ ಸಮಾಜದಲ್ಲಿ ಕಂಡು ಬರುತ್ತದೆ. ಇದು ಭಾರತದಲ್ಲಿ ಖಚಿತವಾದ ಮತ್ತು ನಿಖರವಾದ ಸ್ವರೂಪವನ್ನು ಪಡೆದಿರುವ ಸಾಮಾಜಿಕ ಸ್ತರವಿನ್ಯಾಸದ ರೂಪವಾಗಿದೆ. ಕುಂಚಿಟಿಗ ಜಾತಿಯು ಕುಟುಂಬಗಳ ಸಂಕಲನ ಅದು ಕುಲ-ಗೋತ್ರ-ಬೆಡುಗುಗಳ ಸಾಮಾನ್ಯವಾದ ಹೆಸರನ್ನೂ, ಪೂರ್ವಜ ಮಾನವ ಮತ್ತು ಅನುವಂಶೀಯವಾಗಿ ಪ್ರಕೃತಿದತ್ತವಾದ ಕುಲಕಸುಬನ್ನು

ಹೊಂದಿರುತ್ತದೆ. ಒಳ ಬಾಂಧವ್ಯವನ್ನು ಅನುಸರಿಸುವ ಒಂದು ಸಂಘಟಿತ ಸಮೂಹವಾಗಿರುತ್ತದೆ. ಕುಂಚಿಟಿಗ ಜಾತಿಯು ನಿಶ್ಚಿತವಾದ ಸಾಮಾಜಿಕ ಪರಿಸರವನ್ನೊದಗಿಸುತ್ತದೆ, ಸಹಬಾಳ್ವೆಯನ್ನೂ ವೃದ್ಧಿಸುತ್ತದೆ. ಸಹಕಾರ ಆಧಾರಿತ ಸೇವೆಯನ್ನು ಒದಗಿಸುತ್ತದೆ. ಆರ್ಥಿಕ ಅವಲಂಬನೆಗೆ, ಜನಾಂಗದ ಶುದ್ಧತೆಗೆ, ಬೌದ್ಧಿಕ ಬೆಳವಣಿಗೆಗೆ, ವರ್ಗ ಪ್ರಜ್ಞೆಯೊಂದಿಗೆ ಭಾವೈಕ್ಯತೆಯನ್ನುಂಟು ಮಾಡುತ್ತದೆ. ಸಾಮಾಜಿಕ ವ್ಯವಸ್ಥೆಯಲ್ಲಿ ಆಯಾಯ ಕಾಲಕ್ಕೆ ತಕ್ಕಂತೆ ಸಂಭವಿಸಿದ ಬದಲಾವಣೆಗಳನ್ನು ಬದುಕಿಗೆ ಅಳವಡಿಸಿಕೊಳ್ಳುತ್ತಾ ಹೋಗುವುದು ಜೀವಂತ ಸಮಾಜದ ಸಹಜ ಪ್ರಕ್ರಿಯೆಯಾಗಿದೆ. ಒಂದು ಸಮುದಾಯ ಅಥವಾ ಒಂದು ಪರಿಸರದಲ್ಲಿ ವಾಸಮಾಡುವ ಜನರು ತಮ್ಮದೆಯಾದ ಸಂಸ್ಕೃತಿ ಕಟ್ಟಿಕೊಳ್ಳುತ್ತಾ ಸಾಗುವಾಗ ಇನ್ನೊಂದು ಸಂಸ್ಕೃತಿಯೊಂದಿಗೆ ಮುಖಾಮುಖಿಯಾದಾಗ ಅನೇಕ ರೀತಿಯ ತವಕ ತಲ್ಲಣ, ವಿರೋಧ, ಆಕರ್ಷಣೆ, ವಿಕರ್ಷಣೆ, ಸಂಘರ್ಷ, ಪಲ್ಲಟ, ಸಾಮರಸ್ಯಗಳು ಸಂಭವಿಸಿ ಆ ಸಮುದಾಯದ ಸಾಮಾಜಿಕ, ಧಾರ್ಮಿಕ, ರಾಜಕೀಯ, ಶೈಕ್ಷಣಿಕ ಮತ್ತು ಆರ್ಥಿಕ ಸ್ಥಿತಿ–ಗತಿಗಳು ಮೊದಲಾಗಿ ಒಟ್ಟು ಸಾಂಸ್ಕೃತಿಕ ಬದುಕಿನಲ್ಲಿ ಸ್ಥಿತ್ಯಂತರಗಳಾಗುವುದು ಜೀವಂತ ಸಮಾಜದ ಸಹಜ ಪ್ರಕ್ರಿಯೆಯಾಗಿರುತ್ತದೆ.

**ಕುಂಚಿಟಿಗರ ಬೆಡಗು/ಗೋತ್ರಗಳು**

ಕುಂಚಿಟಿಗ ಜಾತಿ–ಜನಾಂಗದವರ ಬೆಡಗು ಗೋತ್ರಗಳಲ್ಲಿ ಗಿಡ, ಮರ, ಪ್ರಾಣಿಪಕ್ಷಿ, ದವಸಧಾನ್ಯ ಅರಸುಮನೆತನ, ಕಾವಲುಗಾರ, ಸೈನಿಕ ಹೆಸರಿನಲ್ಲಿವೆ. ಎರಡರಿಂದ ನಾಲ್ಕು ಕುಲ–ಗೋತ್ರ ಬೆಡಗು ಸೇರಿ ಒಂದೊಂದು ಗುಂಪುಗಳಾಗಿ ವಿಭಾಗಿಸಲಾಗಿದೆ. ಇವುಗಳಲ್ಲಿ ಸಗೋತ್ರ–ಸೋದರ ಗೋತ್ರ–ಅಡ್ಡದಾಯಾದಿಗಳ ಗೋತ್ರಗಳವರು ಅಣ್ಣ ತಮ್ಮಂದಿರು ಎಂದು ಪರಿಭಾವಿಸಿ ಅವರಲ್ಲಿ ಪರಸ್ಪರ ವಿವಾಹ ಸಂಬಂಧವನ್ನು ನಿಷೇಧಿಸಲಾಗಿದೆ. ಉಳಿದ ಗೋತ್ರಗಳೊಂದಿಗೆ ವೈವಾಹಿಕ ಸಂಬಂಧಗಳನ್ನು ಬೆಳೆಸಬಹುದಾಗಿದೆ. ವಿವಾಹದ ಸಂದರ್ಭದಲ್ಲಿ ತಂದೆಯ ಗೋತ್ರ–ಬೆಡಗಿನ ಜೊತೆಗೆ ತಾಯಿಯ ಕಡೆಯ ಗೋತ್ರ–ಬೆಡಗನ್ನೂ ಗಮನಿಸಲಾಗುತ್ತದೆ. ಅಲ್ಲಿಯೂ ಸಗೋತ್ರ–ಸೋದರಗೋತ್ರ ಅಡ್ಡದಾಯಾದಿಗಳ ಗೋತ್ರಗಳಿದ್ದರೆ ವಿವಾಹ ನಡೆಸುವುದಿಲ್ಲ. ಕುಂಚಿಟಿಗರಲ್ಲಿನ ಪ್ರತಿಯೊಂದು ಗೋತ್ರ–ಬೆಡಗಿನವರಿಗೂ ಪ್ರತ್ಯೇಕ ಮನೆದೇವರುಗಳಿದ್ದು, ಕಟ್ಟೆಮನೆ, ಬಂಡಿಕಾರರು, ಮನೆದೇವರ ಪೂಜಾರಿ ವ್ಯವಸ್ಥೆ ಜಾರಿ ಇದ್ದು, ಶಿಸ್ತಿನ ಸಮಾಜ ನಿರ್ಮಾಣಕ್ಕೆ ಇವು ಸಹಕಾರಿಯಾಗಿವೆ. ಹೀಗೆ ಕುಂಚಿಟಿಗ ಜಾತಿ ಸಮಾಜದ ಗುಂಪು ರಕ್ತ ಸಂಬಂಧದಿಂದ, ಕುಲ–ಗೋತ್ರ–ಬೆಡಗು ಸೂತ್ರದಷ್ಟೇ ದೂರ. ಆದರೆ ಕುಂಚಿಟಿಗರ ಕುಲ ನಿಯಮಗಳ ಮೇರೆಗೆ ಸಗೋತ್ರ–ಸೋದರಗೋತ್ರ–ಅಡ್ಡ ದಾಯಾದಿಗಳ ಗೋತ್ರ ವಿವಾಹ ತೀವ್ರ ನಿಷಿದ್ಧವಾಗಿದೆ. ಇಂತಹ ಗೋತ್ರ ಬೆಡಗುಗಳು ಕುಂಚಿಟಿಗರಲ್ಲೂ ಇದ್ದು, ಕುಂಚಿಟಿಗರಲ್ಲಿ 101 ಬೆಡಗುಗಳಿದ್ದು, ಅವುಗಳಗಲ್ಲಿ 48 ಬೆಡಗುಗಳು ಕರ್ನಾಟಕ ಆಂಧ್ರ ತಮಿಳುನಾಡುಗಳಲ್ಲಿವೆ. ಉಳಿದ ಬೆಡಗುಗಳು ಇನ್ನಿತರೆ ಪ್ರದೇಶಗಳಲ್ಲಿ ನೆಲೆಸಿರುವ ಕುಂಚಿಟಿಗರಲ್ಲಿವೆಂದು ಜನಾಂಗದ ಕೆಲವು ವಿದ್ವಾಂಸರು ಅಭಿಪ್ರಾಯ ಪಟ್ಟಿದ್ದಾರೆ.

**ವಸತಿ ವಿನ್ಯಾಸ**

ಕುಂಚಿಟಿಗರು ಈ ಹಿಂದೆ ಬಾದೆಹುಲ್ಲಿನ ಗುಡಿಸಲುಗಳಲ್ಲಿ ತೆಂಗಿನ ಸೂರು ಮಣ್ಣಿನಿಂದ ಮನೆ ಕಟ್ಟಿಕೊಂಡು ವಾಸಿಸುತ್ತಿದ್ದರು. ಅದರಲ್ಲಿಯೇ ಪಡಸಾಲೆ, ಅಡುಗೆ ಕೋಣೆ, ದೇವರ ಕೋಣೆ, ಮಲಗುವ ಕೋಣೆಗಳನ್ನಾಗಿ ಮಾಡಿಕೊಂಡು ವಾಸಿಸುತ್ತಿದ್ದರು. ಕಾಲಕ್ರಮೇಣ ಕಲ್ಲಿನ ಮನೆ, ಬಿಳಿಯ ಕಲ್ಲಿನ ಮನೆ, ಕರಿ ಹಂಚಿನ ಮತ್ತು ಕೆಂಪು ಹಂಚಿನ ಮನೆಗಳನ್ನುನಿರ್ಮಿಸಿಕೊಂಡು ವಾಸಮಾಡತೊಡಗಿದರು. ಆದರೆ ಇತ್ತೀಚೆಗೆ ಸಿಮೆಂಟಿನ (ಆರ್.ಸಿ.ಸಿ) ಮನೆಗಳನ್ನು ಸ್ಥಿತಿವಂತರಾದವರು ಇಲ್ಲವೆ ಸರ್ಕಾರದಿಂದ ಸೌಲಭ್ಯ ಪಡೆದುಕೊಂಡು ತಮಗನುಕೂಲವಾದಂತೆಯೇ ಇನ್ನುಳಿದ ಜನಾಂಗದವರ ಶೈಲಿಯಲ್ಲಿ ಮನೆಗಳನ್ನು ಕಟ್ಟಿಕೊಂಡು ವಾಸವಾಗಿರುವುದು ಕಂಡುಬರುತ್ತದೆ. ಈ ರೀತಿ ಕುಂಚಿಟಿಗರು ತಮ್ಮ ಶಕ್ತ್ಯಾನುಸಾರ ಮನೆಗಳನ್ನು ಕಟ್ಟಿಕೊಂಡು ವಾಸಿಸುತ್ತಿದ್ದಾರೆ.

**ವೇಷಭೂಷಣಗಳು**

ಕುಂಚಿಟಿಗ ಸಮುದಾಯದವರ ವೇಷಭೂಷಣಗಳು ಒಂದೇ ತೆರನಾಗಿಲ್ಲ. ಏಕೆಂದರೆ ಪ್ರದೇಶದಿಂದ ಪ್ರದೇಶಕ್ಕೆ, ಸಮಾಜದಿಂದ ಸಮಾಜಕ್ಕೆ, ವ್ಯಕ್ತಿಯಿಂದ ವ್ಯಕ್ತಿಗೆ, ಊರಿನಿಂದ ಊರಿಗೆ ಭಿನ್ನವಾಗಿರುತ್ತದೆ. ಲಿಂಗ, ವಯಸ್ಸು, ಸಾಮಾಜಿಕ ಅಂತಸ್ತು, ವೃತ್ತಿಗನುಗುಣವಾಗಿಯೂ ವ್ಯಕ್ತಿಯಿಂದ ವ್ಯಕ್ತಿಗೆ, ಉಡುಗೆ–ತೊಡುಗೆ ಭಿನ್ನವಾಗಿರುವುದು ಕಂಡುಬರುತ್ತದೆ. ದಾವಣಗೆರೆ ಮತ್ತು ಚಿತ್ರದುರ್ಗ ಜಿಲ್ಲೆಯ ಕೆಲವು ಪ್ರದೇಶಗಳಲ್ಲಿ ಬೇರೆ ಬೇರೆ ತರಹದ ಉಡುಪುಗಳನ್ನು ಧರಿಸಿದರೂ ನೋಡಲು ಒಂದೇ ತೆರನಾಗಿ ಕಂಡುಬರುತ್ತವೆ. ಮಾನವನ ಬದುಕಿಗೆ ಗಾಳಿ, ನೀರು, ಆಹಾರ, ವಸತಿ ಎಷ್ಟು ಮುಖ್ಯವೋ ಅಷ್ಟೇ ಮುಖ್ಯವಾದುದು ಉಡುಪು. ಗ್ರಾಮೀಣ ಬಾಲಕರು ತೋಳಿಲ್ಲದ ಅಂಗಿ, ಅರ್ಧ ಚಡ್ಡಿ ಇಲ್ಲವೆ ಬರೀ ಅಂಗಿಯ ಮೇಲಿರುವವರು. ಬಾಲಕಿಯರು ಅಂಗಿ, ಜಾಕೀಟು ಲಂಗವನ್ನು ಧರಿಸುತ್ತಿದ್ದರು. ಹೆಣ್ಣುಮಕ್ಕಳು ಸೀರೆ ಮತ್ತು ಕುಪ್ಪಸಗಳನ್ನು ಧರಿಸುತ್ತಿದ್ದರು. ಗಂಡಸರು ಬಿಳಿ ಧೋತರ ಮತ್ತು ಅಂಗಿ ಇಲ್ಲವೇ ತೋಳಿಲ್ಲದ ಒಳ ಅಂಗಿ, ತಲೆಗೆ ಪೇಟ ಧರಿಸುತ್ತಿದ್ದರು. ಮುದುಕರು ಖಾದಿ ಪೈಜಾಮ ಅಂಗಿ, ಮುಂಡಾಸು, ಧೋತರ, ಮುದುಕಿಯರು ಇಳಕಲ್, ಕಂಚಿಯ ದಡಿಸೀರೆ, ಕುಪ್ಪಸ ಧರಿಸುತ್ತಿದ್ದರು. ಆದರೀಗ ಕಾಲ ಬದಲಾಗಿ ಇಂದು ಜೀನ್ಸ ಪ್ಯಾಂಟು, ಶರ್ಟು, ಕೋಟು ಜಾತಿ–ಮತಗಳ ಅಂತರವನ್ನೇ ದೂರ ಮಾಡಿವೆ ಹೆಣ್ಣುಮಕ್ಕಳು ಚೂಡಿದಾರ, ಮಿಡಿ, ಸ್ಕರ್ಟ್‌ಗಳನ್ನು ಧರಿಸುತ್ತಾರೆ. ಗಂಡಸರ–ಹೆಂಗಸರ ವೇಷಗಳೊಂದೇ ತೆರನಾಗಿರುವುದನ್ನು ನಾವಿಂದು ಕಾಣುತ್ತೇವೆ. ನಗರವಾಸಿಗರಲ್ಲಿ ವಿವಿಧ ನಮೂನೆಯ ಬಣ್ಣ ಬಣ್ಣದ ನೈಲಾನ್, ಉಲನ್ ಮುಂತಾದ ತರಹದ ಸೀರೆಗಳು ಹೆಂಗಳೆಯರ ಮನೆಯ ಟ್ರಝುರಿ ತುಂಬಿವೆ. ಬಹುತೇಕ ಕುಂಚಿಟಿಗರು ದಿನಾಲೂ ಕೃಷಿ ಕೆಲಸದಲ್ಲಿ ತೊಡಗುವ ಉಡುಗೆಗಳಾದರೆ ಹಬ್ಬ ಹರಿದಿನಗಳಲ್ಲಿ ಹೊಸ ಹೊಸ ಬಟ್ಟೆಗಳನ್ನು ಧರಿಸಿಕೊಂಡು ಸಂಭ್ರಮಿಸುತ್ತಾರೆ.

**ಆಭರಣಗಳು**

ಒಡವೆಗಳೆಂದರೆ ಅದರಲ್ಲೂ ಸ್ತ್ರೀಯರಿಗೆ ತುಂಬಾ ಇಷ್ಟ ಮತ್ತು ಪ್ರೀತಿ. ಆಭರಣಗಳು ನಮ್ಮ ಸಂಸ್ಕೃತಿಯ ಪ್ರತೀಕವೂ ಹೌದು. ಚಿನ್ನ, ಬೆಳ್ಳಿ, ತಾಮ್ರದ ಒಡವೆಗಳನ್ನು ಧರಿಸುವುದು ಪೂರ್ವಕಾಲದಿಂದಲೇ ಪ್ರಚಲಿತದಲ್ಲಿದೆ. ಆಭರಣಗಳು ಅಲಂಕಾರಕ್ಕಲ್ಲದೇ ನಂಬಿಗೆ ಸಂಪ್ರದಾಯಗಳ ಸಂಬಂಧವಾಗಿಯಾದರೂ ಧರಿಸಬೇಕಾದವು ಇವೆ. ತಾಮ್ರದ ಇಲ್ಲವೆ ಪಂಚಲೋಹದ ಮುಡಿ ಬಳೆ, ಉಂಗುರ, ತಾಯಿತ, ಕಾಲುಂಗರ, ತೋಳಬಂಧಿ ಮುಂತಾದವುಗಳನ್ನು ಮಾಂತ್ರಿಕ ಶಕ್ತಿಯಿಂದ ಕೂಡಿದ್ದವಾದವುಗಳನ್ನು ತೊಡುವುದುಂಟು. ತಾಯಿತದಂತಹ ಆಭರಣ ಧರಿಸುವ ಮುಖ್ಯ ಉದ್ದೇಶ ದುಷ್ಟಶಕ್ತಿಗಳ ಕಾಟದಿಂದ ದೂರವಾಗಲೆಂದು ಧರಿಸುತ್ತಾರೆ. ಮದುವೆಯ ಸಂಭ್ರಮಕ್ಕೆಂದು ತಾಳಿಯುಳ್ಳ ಕರಿಮಣಿಸರ, ಕಿವಿಯೋಲೆ, ನೆಕ್‌ಲೇಸ್, ಬಳೆ, ಚಪಲಹಾರ ಮುಂತಾದವುಗಳನ್ನು ಹೆಂಗಸರು

ಧರಿಸಿದರೆ, ಗಂಡಸರು ಉಂಗುರ, ಚೈನ್‌ಸರ, ಬ್ರಾಸ್‌ಲೇಟ, ಮುಂತಾದವುಗಳನ್ನೀಗ ಧರಿಸುತ್ತಾರೆ. ಆದರೀಗ ಕಳ್ಳರ ಭಯದಿಂದಾಗಿ ಎಲ್ಲ ಆಭರಣಗಳನ್ನು ರೋಲ್‌ಗೋಲ್ಡ್ ಸಿದ್ಧ ಆಭರಣಗಳನ್ನು ಧರಿಸುವುದನ್ನು ನಾವಿಂದು ಕಾಣುತ್ತೇವೆ.

**ಆಹಾರ ಪದ್ಧತಿ**

'ಎಲ್ಲಾರು ಮಾಡುವುದು ಹೊಟ್ಟೆಗಾಗಿ ಗೇಣು ಬಟ್ಟೆಗಾಗಿ' ಎಂಬ ದಾಸವಾಣಿಯು ನಿತ್ಯಸತ್ಯವಾದುದು. ದುಡಿದುಂಡರೆ ಅನ್ನ ರುಚಿಸುತ್ತದೆ. ಕುಂಚಿಟಿಗರು ಮೂಲತಃ ಪಶುಪಾಲಕರು. ಉಳುಮೆ ಮಾಡಿಕೊಂಡು ನದಿ–ಸಮುದ್ರದ ತೀರದಲ್ಲಿ ವಾಸವಾಗಿರುವವವರು ಸಸ್ಯಹಾರಿಗಳು. ಬೇಯಿಸಿ,ಅಡುಗೆ ಮಾಡಿ ಊಟ ಮಾಡುವ ಪದ್ಧತಿಯು ಮೊದಲಿನಿಂದಲೂ ರೂಢಿಯಲ್ಲಿದೆ. ನದಿತೀರದ ಪ್ರದೇಶಗಳಲ್ಲಿ ಕುಂಚಿಟಿಗರು ಜನವಸತಿ ಕಡಿಮೆ ಇವರು ಬೆಟ್ಟ–ಗುಡ್ಡ ಬಯಲು ಸೀಮೆಯ ಪ್ರದೇಶಗಳೇ ಹೆಚ್ಚು, ಇಲ್ಲಿ ಮಳೆ–ಬೆಳೆ ಕಡಿಮೆ ಪ್ರಮಾಣದಲ್ಲಿರುವುದರಿಂದ ಕಷ್ಟಪಟ್ಟು ದುಡಿದು ಜೀವನೋಪಾಯ ಸಾಗಿಸುವುದು ಇವರುಗಳಿಗೆ ಅನಿವಾರ್ಯವಾಗಿದೆ. ಇದ್ದ ಅಲ್ಪಸ್ವಲ್ಪ ಭೂಮಿಯಲ್ಲಿ ರಾಗಿ, ಜೋಳ, ಮೆಕ್ಕೆಜೋಳ, ಹೆಸರು, ತೊಗರಿ, ಅಲಸಂದಿ, ಹತ್ತಿ, ಶೇಂಗಾ, ಸೂರ್ಯಕಾಂತಿ, ಈರುಳ್ಳಿ ಮುಂತಾದ ಬೆಳೆಗಳ ಜೊತೆಗೆ ಪಂಪಸೆಟ್ ಹೊಂದಿದ ಕೆಲವರು ತರಕಾರಿಗಳ ಜೊತೆ ಸೊಪ್ಪುಗಳನ್ನು ಬೆಳೆಯುತ್ತಾರೆ. ಇವರು ಅನ್ನ,ರೊಟ್ಟಿ, ಅಂಬಲಿ, ಮುದ್ದೆಯೊಂದಿಗೆ ಕಾಳುಪಲ್ಲ್ಯ, ಸೊಪ್ಪಿನಸಾರು, ಹಾಲು, ಮೊಸರು, ಮಜ್ಜಿಗೆ, ಬೆಣ್ಣೆ, ತುಪ್ಪ ಮುಂತಾಗಿ ಹೈನುಗಾರಿಕೆಯನ್ನು ಸುಗ್ಗಿಯ ದಿನಗಳಲ್ಲಿ ವಿಶೇಷ ಎನ್ನುವಂತೆ ಸಿಹಿ ಪದಾರ್ಥಗಳಾದ ಪಾಯಸ, ಹೋಳಿಗೆ,ಕರೆಗೆಡಬುಗಳನ್ನು ಮಾಡಿ ಸವಿಯುತ್ತಾರೆ. ಕುಂಚಿಟಿಗರು ದಿನನಿತ್ಯ ಆಹಾರದ ವಿಶೇಷವೇ ಸಸ್ಯಹಾರವಾಗಿದೆ.

**ಧಾರ್ಮಿಕ ಜೀವನ**

ಕುಂಚಿಟಿಗ ಸಮುದಾಯದವರು ಧರ್ಮದ ಯಾವ ರೂಪವನ್ನು ಒಪ್ಪಿಕೊಂಡಿರುತ್ತಾರೋ ಅದಕ್ಕನುಗುಣವಾಗಿ ಪ್ರಾರ್ಥನೆ, ಪೂಜೆ, ಹೋಮ, ಜಪ, ತಪ, ಆಚರಣೆ, ಅನುಸರಣೆ ಮೊದಲಾದವುಗಳನ್ನು ಮಾಡುತ್ತಾರೆ. ಪ್ರತಿಯೊಂದು ಧರ್ಮವೂ ಕೂಡ ಅದರದೇ ಆದ ನೀತಿ ಸಂಹಿತೆಯನ್ನೂ, ಕುಲ–ಗೋತ್ರ ಬೆಡಗು ಸಂಹಿತೆಯನ್ನೂ ಹೊಂದಿ, ಧಾರ್ಮಿಕ ಕಟ್ಟುಪಾಡುಗಳು, ನೀತಿ ನಿಯಮಗಳು, ನೀತಿ ಸಂಹಿತೆಯ ದ್ಯೋತಕಗಳಾಗಿರುವುವು.

ದಂತಕಥೆಗಳ ಪ್ರಕಾರ ಕುಂಚಿಟಿಗ ಜನಾಂಗದ ಮೇಲೆ ಪ್ರಪ್ರಥಮವಾಗಿ ಆರ್ಯರ ಪ್ರಭಾವ ಹೆಚ್ಚಾಗಿ ಕಾಣುತ್ತದೆ. ಕುಂಚಿಟಿಗರಲ್ಲಿ ದ್ರಾವಿಡ ಸಂಪ್ರದಾಯಗಳಿದ್ದರೂ ಆರ್ಯರ ಪ್ರಮುಖ ಆರಾಧನೆಗಳು. ದೇವರ ಪೂಜೆ, ಗೋವು ಪೂಜೆ ಮತ್ತಿತರ ಸಂಪ್ರದಾಯಗಳನ್ನು ಆರ್ಯರಿಂದ ಅಳವಡಿಸಿಕೊಂಡಿರಬಹುದು. ಇದೇ ರೀತಿ ಕುಂಚಿಟಿಗ ಜನಾಂಗವು ವೈಷ್ಣವ ಧರ್ಮ ಮತ್ತು ಶೈವ ಧರ್ಮದ ಪ್ರಭಾವಗಳಿಗೆ ಒಳಗಾಗಿದ್ದಾರೆ. ಶ್ರೀವೈಷ್ಣವದ ಪಂತದ ರಾಮಾನುಜಾಚಾರ್ಯರ ಪ್ರಭಾವ ಬಹಳವಾಗಿ ಇದೆ. ರಾಮ ಮತ್ತು ಆಂಜನೇಯ ದೇವರ ಪೂಜೆ, ತಿರುಪತಿ ದೇವಸ್ಥಾನಕ್ಕೆ ನಡೆಯುವುದು. ಮತ್ತು ದಾಸಯ್ಯನಿಗೆ ಆದ್ಯತೆ ಮತ್ತಿತರ ವೈಷ್ಣವ ಧರ್ಮ ಸಂಪ್ರದಾಯಗಳು ಕುಂಚಿಟಿಗರಲ್ಲಿ ಬೆಳೆದಿದೆ.

**ಸ್ತ್ರೀಯರ ಸ್ಥಾನಮಾನ**

'ಮಾತೃದೇವೋ ಭವಃ' ಎಂಬುದು ಭಾರತೀಯ ಪರಂಪರೆಯಲ್ಲಿ ಸ್ತ್ರೀಗೆ ಹೆಚ್ಚಿನ ಮಹತ್ವವನ್ನು ತೋರಿಸುತ್ತದೆ. ಹೆಣ್ಣುಮಗಳು ಮನೆಯನ್ನಷ್ಟೇ ಏಕೆ ಇಡೀ ಜಗತ್ತನ್ನೇ ಬೆಳಗಬಲ್ಲಳು; 'ತೊಟ್ಟಿಲು ತೂಗುವ ಕೈ ಜಗತ್ತನ್ನೇ ತೂಗಬಲ್ಲದು' ಎಂಬ ಗಾದೆಯೂ ಜನಜನಿತವಾಗಿದೆ. ಒಬ್ಬ ಪುರುಷನ ಯಶಸ್ಸಿನ ಹಿಂದೆ ಒಬ್ಬ ಹೆಣ್ಣು ಇರುತ್ತಾಳೆ. ಆದುದರಿಂದ ಸಂಸ್ಕೃತ ಸುಭಾಷಿತದಲ್ಲಿ ಹೇಳಿದಂತೆ "ಗೃಹಿಣೀ ಗೃಹಮುಚ್ಚ್ಯತೇ" ಎಂದುದಾಗಿದೆ. ಮಾತೃವಿನಿಂದ ಆರಂಭವಾದ ಮಾನವನ ಜೀವನ ಆ ಮಾತೃವಿನ ಆಸರೆಯಲ್ಲಿಯೇ ಸಾವಿರಾರು ವರ್ಷಗಳನ್ನು ಕಳೆದಿದೆ. ಅಂದಿನಿಂದ ಇಂದಿನವರೆಗೂ ಬದಲಾವಣೆಯಲ್ಲಿ ಭಾಗಿಯಾಗುತ್ತಾ ಹೆಣ್ಣಿನ ಮನದ ಸೂಕ್ಷ್ಮ ಮತ್ತು ನವಿರಾದ ಭಾವನೆಗಳನ್ನು ತಮ್ಮ ಸಮುದಾಯದ ಸಂಸ್ಕೃತಿ, ನಂಬಿಕೆ, ನಡಾವಳಿಯಲ್ಲಿ ಸಮರ್ಥವಾಗಿ ಬಿಂಬಿಸುತ್ತಾ; ಹಾಡು, ಹಸೆ, ಹೆಣಿಕೆಗಳ, ಕಸೂತಿ ಕಲೆಗಳ ಮೂಲಕ ಅಭಿವ್ಯಕ್ತಿಸಿದ್ದಾಳೆ. ಅಂತೆಯೇ ಕುಂಚಿಟಿಗರು ಸಹ ಮೂಲದಲ್ಲಿ ಮಾತೃಪ್ರಧಾನ ಕುಟುಂಬ ವ್ಯವಸ್ಥೆಯಿಂದ ಪಿತೃಪ್ರಧಾನ ವ್ಯವಸ್ಥೆಗೆ ಪಲ್ಲಟಗೊಂಡಿದ್ದಾರೆ.

ಆಕೆ ಪುರುಷನಿಗೆ ಸರಿಸಮಾನವಾಗಿ ದುಡಿಯುತ್ತಾಳೆ. ಹೊಲಗೆಲಸ–ಮನೆಗೆಲಸಗಳಲ್ಲೂ ಭಾಗವಹಿಸುತ್ತಾಳೆ. ಪ್ರತಿಯೊಂದು ಕ್ಷೇತ್ರದಲ್ಲಿ ಮಹಿಳೆಯರ ಪಾಲುಗಾರಿಕೆ ಕಂಡುಬರುತ್ತದೆ. ಮಕ್ಕಳ ಪೋಷಣೆಯ ಹೊಣೆಯೂ ಇವರ ಹೆಗಲಿಗೇರಿದೆ. ಸಮುದಾಯದಲ್ಲಿ ಅಕಸ್ಮಾತ್ ಪತಿ ತೀರಿ ಹೋದರೆ ಮನೆಯ ಕೌಟುಂಬಿಕ ಜವಾಬ್ದಾರಿಯನ್ನು ಸಂಪೂರ್ಣವಾಗಿ ನಿಭಾಯಿಸುತ್ತಾರೆ. ಮಕ್ಕಳ ಪ್ರಗತಿಗಾಗಿ ಶಿಕ್ಷಣದ ಬಗೆಗೂ ಕಾಳಜಿ ವಹಿಸುತ್ತಾಳೆ. ಇಂಥ ಕೆಲಸ ಕಾರ್ಯ ಮಾಡುತ್ತಾ ಹೊಟ್ಟೆ ಬಟ್ಟೆ ಕಟ್ಟಿಕೊಂಡು ಹಣ ಸಂಪಾದಿಸಿ ಮಕ್ಕಳ ಶಿಕ್ಷಣ, ಮದುವೆ ಮುಂತಾದ ಕಾರ್ಯಗಳನ್ನು ನೆರವೇರಿಸಬಲ್ಲಳು. ಮೊದಮೊದಲು ಪ್ರಾಥಮಿಕ ಹಂತದ ಶಿಕ್ಷಣವು ಈ ಮತದ ಮಹಿಳೆಯರಿಗೆ ಸಾಕು ಸಾಕಾಗಿತ್ತು. ಊರಲ್ಲಿರುವ ಶಾಲೆಗಳೇ ಇವರಿಗೆ ಶಿಕ್ಷಣದ ಸೌಲಭ್ಯವಾಗಿತ್ತು. ಕಲಿಯುವವರ ಸಂಖ್ಯೆಯ ಹಿಂದಿನ ಕಾಲದ ಜನರಲ್ಲಿ ಕಡಿಮೆಯ ಪ್ರಮಾಣದಲ್ಲಿತ್ತು. ಆದರೀಗ ಸರ್ಕಾರದ ಸೌಲಭ್ಯದಿಂದಾಗಿ ಎಸ್.ಎಸ್.ಎಲ್.ಸಿ., ಬಿ.ಎ./ಬಿಎಸ್.ಸಿ./ಬಿ.ಕಾಂ./ಬಿ.ಇ./ಬಿ.ಇಡಿ/ ಮುಂತಾದ ಪದವೀಧರರಾಗಿ ಸ್ಪರ್ಧಾತ್ಮಕ ಪರೀಕ್ಷೆಗಳಿಗೂ ಹಾಜರಾಗಿ ಕೆಲವೇ ಕೆಲವು ಮಹಿಳೆಯರಾದರೂ ಸರ್ಕಾರಿ, ಅರೆ ಸರ್ಕಾರಿ, ಖಾಸಗಿ ಶಾಲಾ–ಕಾಲೇಜು ಮತ್ತಿತರ ಆಡಳಿತ ಕಛೇರಿಯಂತಹ ಸೇವೆಗಳಲ್ಲಿ ತೊಡಗಿಸಿಕೊಂಡದ್ದು ಸಮಾಜದಲ್ಲಿ ತನ್ನ ಸ್ವಂತ ಕಾಲ ಮೇಲೆ ನಿಲ್ಲುವ ಶಕ್ತಿ ಸಂಪಾದಿಸಿದ್ದಾಳೆ.

**ನ್ಯಾಯ ಪದ್ಧತಿ**

ಸಮುದಾಯವೆಂದ ಮೇಲೆ ಸಣ್ಣ–ಪುಟ್ಟ ವ್ಯಾಜ್ಯಗಳು, ನ್ಯಾಯ ವಿವಾದಗಳು ಸಂಭವಿಸುವವು. ಇದು ಎಲ್ಲ ಜನಾಂಗದವರಲ್ಲಿರುವಂತೆ ಕುಂಚಿಟಿಗರಲ್ಲೂ ಕಂಡು ಬರುತ್ತದೆ. ಮಾನವ ಒಂದೇ ಕಡೆ ನೆಲೆನಿಂತು, ಕೃಷಿ ಚಟುವಟಿಕೆಗಳನ್ನು ಪ್ರಾರಂಭಿಸಿ ಬದುಕುವ ವಿಧಾನವನ್ನು ಎಂದು ಕಲಿತನೋ ಅಂದಿನಿಂದಲೂ ನ್ಯಾಯ–ಪಂಚಾಯತಿಗಳಿದ್ದುದನ್ನು ಇತಿಹಾಸದ ಪುಟಗಳನ್ನು ತಿರುವಿ ಹಾಕಿದಾಗ ತಿಳಿದುಬರುತ್ತದೆ. ಸರ್ಕಾರದ ಸಂವಿಧಾನಾತ್ಮಕವಾಗಿರುವ ಪೋಲಿಸ್ ಠಾಣೆ ಮತ್ತು ನ್ಯಾಯಾಲಯದ ಮೊರೆ ಹೋಗುವ ಸಮುದಾಯಗಳೂ ಇವೆ. 'ಮನಕ್ಕಂಜದಿದ್ದರೂ ಜನಕ್ಕೆ ಅಂಜಬೇಕು' ಎಂಬ ನಾಣ್ನುಡಿಯಂತೆ ಜನಸಮುದಾಯಕ್ಕೆ ಹೆದರುತ್ತಾರೆ. ಕಾನೂನಿನ್ವಯ ಬರುವ ಕಟ್ಟಳೆಗಳಿಗಿಂತ ಸಾಮಾಜಿಕ ಕಟ್ಟಳೆಗಳು ಹೆಚ್ಚು ಆತ್ಮೀಯವೆನಿಸುತ್ತವೆಯಲ್ಲದೇ ಖರ್ಚು ಕಂದಾಯವೂ ಸಹ ಸಹಕಾರಿಯಾಗಿರುತ್ತದೆಂಬುದು ಸಮುದಾಯದ ನಂಬುಗೆಯೂ ಆಗಿದೆ.

ಈ ಸಮಾಜದಲ್ಲಿ ಗಂಡ–ಹೆಂಡತಿ ಜಗಳ, ಅಕ್ಕಪಕ್ಕದವರೊಡನೆ ಜಗಳವಾದರೆ, ಅನ್ಯೆತಿಕ ಮದುವೆ ನಡೆದರೆ, ಹಿರಿಯರ ಒಪ್ಪಿಗೆಯಿಲ್ಲದೆ ಮದುವೆಯಾದರೆ ಈ ಸಮುದಾಯದ ಹಿರಿಯರು,

ಗೌಡರು, ನಾಡಗೌಡ, ಪಂಚರು ಈ ಮುಂತಾದವರು ಕೂಡಿ ನ್ಯಾಯ ಪಂಚಾಯತಿ ಮಾಡುತ್ತಿದ್ದರು. ತಮ್ಮ ಜನರಿಗಾಗಿ ಮಾಡಿಕೊಂಡ ನ್ಯಾಯಾಲಯದ ಕಟ್ಟೆಗಳು, ಅರಳಿಕಟ್ಟೆ, ಪಂಚಾಯತಿ ಇರುತ್ತಿದ್ದವು. ಅಲ್ಲಿಯೇ ನ್ಯಾಯ ತೀರ್ಮಾನ ಮಾಡಲಾಗುತ್ತಿತ್ತು. ಹೀಗಾಗಿ ಇಂದಿನವರೆಗೂ ಈ ಜನರಲ್ಲಿ ಕಟ್ಟೆಮನೆ, ದೊಡ್ಡಮನೆ ಎಂಬ ಅಡ್ಡ ಹೆಸರುಗಳು ಉಳಿದುಕೊಂಡು ಬಂದಿವೆ. ಸಮುದಾಯಗಳು ಸಣ್ಣದಿರಲಿ, ದೊಡ್ಡದಿರಲಿ ತಂಟೆ–ತಗಾದೆಗಳನ್ನು, ತಪ್ಪು–ಸರಿಗಳನ್ನು ವಿಚಾರಿಸಿ ಶಿಕ್ಷಿಸುವ ನ್ಯಾಯ ತೀರ್ಪು ವ್ಯವಸ್ಥೆ ಸಮುದಾಯದ ಪ್ರಾಮಾಣಿಕ ಬದುಕಿಗೆ ಇದರಿಂದ ಸಹಕಾರಿಯಾಗುತ್ತದೆ ಮತ್ತು ಬಾಂಧವ್ಯ ಬೆಳೆಯುತ್ತದೆ. ಇಲ್ಲದಿದ್ದರೆ ಪೋಲಿಸ್ ಠಾಣೆ ಅಥವಾ ನ್ಯಾಯಾಲಯದ ಮೋರೆಯನ್ನು ಹೋಗಬೇಕಾಗುತ್ತದೆ.

**ಉಪಸಂಹಾರ**

ಕುಂಚಿಟಿಗರು ಸಾಮಾಜಿಕವಾಗಿ ಹಾಗೂ ಸಾಂಸ್ಕೃತಿಕವಾಗಿ ಭವ್ಯ ಇತಿಹಾಸ ಹಾಗೂ ಪರಂಪರೆಯನ್ನು ಹೊಂದಿರುವ ಜನಾಂಗ, ಇವರು ಶತ ಶತಮಾನಗಳಿಂದಲೂ ತನ್ನದೇ ಆದ ಕುಲ–ಗೋತ್ರ–ಬೆಡಗುಗಳಲ್ಲಿನ ಸಮಾನತೆ ಸಾಮರಸ್ಯದ ಸಂಪ್ರದಾಯಕ್ಕೆ ಒಳಗಾಗಿ ಭದ್ರಬುನಾದಿಯೊಂದಿಗೆ ಯಾರಿಗೂ ಕುಗ್ಗದ–ಬಗ್ಗದ ತನ್ನದೇ ಆದ ನೆಲಗಟ್ಟಿನ ಸಹಜ ಜಾತಿ ಜನಾಂಗದ ಜನರೆನಿಸಿದ್ದಾರೆ. ಕುಂಚದಲ್ಲಿರುವ ನೈಸರ್ಗಿಕ ಶಕ್ತಿಯ ಆವಿಷ್ಕಾರವೇ ಕುಂಚಿಟಿಗ ಧರ್ಮ, ಕುಂಚಿಟಿಗರ ಒಡಲು ಭಾವೈಕ್ಯತೆಯ ಕಡಲು, ಹಿಂದೂ ಧರ್ಮಕ್ಕೆ ಇದು ಸಾಂಸ್ಕೃತಿಕ ಕೊಡುಗೆ, ಉತ್ತರದಿಂದ ದಕ್ಷಿಣದವರೆಗೆ ಎಲ್ಲಿ ನೋಡಿದಾಗಲೂ ಬೆಡಗಿನಲ್ಲಿನ ಶಿಷ್ಟಾಚಾರ ಅನುಸರಣೆಯಲ್ಲಿನ ಸಾಮರಸ್ಯದ ಸೊಬಗು. ಆದರೆ ಇಂದು ಪ್ರತಿ ಸಮುದಾಯಗಳನ್ನು ಅಭ್ಯಾಸಿಸುವ ಪ್ರಯತ್ನವನ್ನು ಮಾಡಬೇಕಾಗಿದೆ. ಇತ್ತೀಚೆಗೆ ಕೆಲವು ವಿಶ್ವವಿದ್ಯಾಲಯಗಳು ಹಿಂದುಳಿದ ಅಲಕ್ಷಿತ ಬುಡಕಟ್ಟು ಸಮುದಾಯಗಳನ್ನು ಕುರಿತು ಸಂಶೋಧನೆಗಳನ್ನು ಕೈಗೆತ್ತಿಕೊಂಡಿರುವುದು ಸ್ವಾಗತಾರ್ಹವೆನಿಸುತ್ತದೆ. ಪ್ರತಿಯೊಂದು ಜನಾಂಗಗಳೂ ವಿಶಿಷ್ಟವಾದ ಸಾಮಾಜಿಕ ಮತ್ತು ಸಾಂಸ್ಕೃತಿಕ ಬದುಕಿನ ವೈಶಿಷ್ಟ್ಯಗಳನ್ನು ಹೊಂದಿದ್ದು ಅನನ್ಯತೆಯನ್ನು ಉಳಿಸಿ ಬೆಳೆಸುವಲ್ಲಿ ಈ ಅಧ್ಯಯನಗಳು ಸಹಕಾರಿಯಾಗಿವೆ.

**ಗ್ರಂಥಸೂಚಿ**


1. ಅಂಬಳಿಕೆ ಹಿರಿಯಣ್ಣ ಮಲೆನಾಡಿನ ವೈಷ್ಣವ ಒಕ್ಕಲಿಗರ ಸಂಸ್ಕೃತಿ 1999 ಕ.ಪು.ಪ್ರಾ ಬೆಂಗಳೂರು
2. ಆಂಜನಪ್ಪ ವಿ. ಕುಂಚಿಟಿಗ ಸಮಾಜ ಪರಿಚಯ 2011 ಉಷಾ ಪ್ರಕಾಶನ ಬೆಂಗಳೂರು.
3. ಗಿರಿಜಾ ಟಿ ದಾವಣಗೆರೆ ಇದು ನಮ್ಮ ಜಿಲ್ಲೆ 2001 ನಿಹಾರಿಕ ಪ್ರಕಾಶನ, ದಾವಣಗೆರೆ.
4. ಜೀನಹಳ್ಳಿ ಸಿದ್ಧಲಿಂಗಪ್ಪ ಗ್ರಾಮೀಣ ಒಗಟು ಮತ್ತು ಗಾದೆಗಳು ಶೃತಿ ಪ್ರಕಾಶನ, ಜೀನಹಳ್ಳಿ, ಹೊನ್ನಾಳಿ
5. ತಾರಿಹಳ್ಳಿ ಹನುಮಂತಪ್ಪ ಕರ್ನಾಟಕದ ಬುಡಕಟ್ಟು ಸಮುದಾಯಗಳು 2010 ಪ್ರಸಾರಾಂಗ ಕವಿವಿ ಹಂಪಿ
6. ನಾಗರಾಜು ಎಂ ಹೆಚ್ ಕುಂಚಿಟಿಗರ ಸಾಂಸ್ಕೃತಿಕ ಇತಿಹಾಸ 2003 ಅನಿಕೇತನ ಪ್ರಕಾಶನ, ತುಮಕೂರು
7. ನಾವಡ ಎ ವಿ ಕರ್ನಾಟಕ ರಾಜ್ಯ ಕೋಶ–೪ ಜನಸಮುದಾಯ ಸಂಪುಟ 2000 ಪ್ರಸಾರಾಂಗ ಕವಿವಿ ಹಂಪಿ
8. ಪುಟ್ಟಯ್ಯ ಎಂ ಕುಂಚಿಟಿಗರ ಸಮಾಜ ಚರಿತ್ರೆ 2002 ಅಖಿಲ ಕುಂಚಿಟಿಗರ ಮಹಾಮಂಡಲ, ಬೆಂಗಳೂರು
9. ಮೀರಾಸಾಬಿಹಳ್ಳಿ ಶಿವಣ್ಣ (ಸಂ) ಕುಂಚಿಟಿಗರು 2012 ಬೆಂಗಳೂರು.
10. ಶಂಕರರಾವ್ ಚ ನ ಭಾರತೀಯ ಸಮಾಜಶಾಸ್ತ್ರ, 2004 ಚಾಂದ್ ಕಂಪನಿ, ನವದೆಹಲಿ
11. ಶಿರೂರು ಬಿ ವಿ ಸಂಶೋಧನಾ ಸ್ವರೂಪ 2016 ಅನ್ನಪೂರ್ಣ ಪ್ರಕಾಶನ ಹುಬ್ಬಳ್ಳಿ.
12. ಶಿವಲಿಂಗಪ್ಪ ಸಿ(ಸಂ) ಜನಪದ ಸಾಂಸ್ಕೃತಿಕ ವೀರರು 2006 ಪ್ರಸಾರಾಂಗ ಕುವಿವಿ ಶಂಕರಘಟ್ಟ.